ಕವಯಿತ್ರಿ, ವಿಮರ್ಶಕಿ ಗೀತಾ ವಸಂತ ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿ. ಮೂಲತಃ ಶಿರಸಿಯವರು. ತತ್ವಶಾಸ್ತ್ರ, ಸ್ತ್ರೀವಾದಿ ಚಿಂತನೆಗಳಲ್ಲಿ ಆಸಕ್ತರು. 'ಹೊಸಿಲಾಚೆ ಹೊಸ ಬದುಕು', 'ಪರಿಮಳದ ಬೀಜ' (ಕವಿತೆಗಳು); 'ಚೌಕಟ್ಟಿನಾಚೆಯವರು' (ಕಥಾ ಸಂಕಲನ); 'ಬೆಳಕಿನ ಬೀಜ', 'ಬೇಂದ್ರೆ ಕಾವ್ಯ ಅವಧೂತ ಪ್ರಜ್ಞೆ', 'ಹೊಸ ದಿಗಂತದ ಹೊಸದಾರಿ' (ವಿಮರ್ಶೆ) ಅವರ ಪ್ರಮುಖ ಕೃತಿಗಳು.

ಸ್ತ್ರೀಯ ಅಸ್ಮಿತೆಯ ಹುಡುಕಾಟ ಹಾಗೂ ಹೋರಾಟದ ಮನೋಭಾವ ಸ್ತ್ರೀವಾದ ಪರಿಚಯವಾಗುವ ಮುಂಚೆಯೂ ನಮ್ಮ ನೆಲದಲ್ಲಿತ್ತು. ಉದಾಹರಣೆಗೆ, ಶ್ಯಾಮಲಾ ಬೆಳಗಾಂವ್ಕರ್, ಸರಸ್ವತಿ ಬಾಯಿ ರಾಜವಾಡೆ ಮುಂತಾದ ಹೆಣ್ಣುಮಕ್ಕಳಿಗೆ ಇಂಥ ಅರಿವು ಇತ್ತು. ಮನಸ್ಸಿನಲ್ಲಿಯೇ ಪ್ರತಿಭಟನೆಯೂ ಇತ್ತು. ಅದನ್ನು ವ್ಯಕ್ತಪಡಿಸಲು ಅವರು ಸೌಮ್ಯ ಮಾರ್ಗಗಳನ್ನು ಅನುಸರಿಸಿದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಡೆದ ಸುಧಾರಣಾವಾದಿ ಚಳವಳಿಗಳೂ ಜಾಗೃತ ಸ್ತ್ರೀಯರ ಮೇಲೆ ಪ್ರಭಾವ ಬೀರಿದವು. ಆದರೆ, ಇದನ್ನು ನಮಗೆ ತಿಳಿಸುವ, ಉದ್ದೀಪಿಸುವ ಅಂಶಗಳು ಪಠ್ಯಕ್ರಮದಲ್ಲಿರಲಿಲ್ಲ. ನಾನು ಪ್ರೌಢಶಾಲೆಯಲ್ಲಿರುವಾಗ ನಮ್ಮಲ್ಲಿದ್ದ ಬಸವಣ್ಣನವರ್ ಎಂಬ ಮೇಡಂ ಈ ಬಗೆಗೆ ಬಹಳ ಮಾತನಾಡುತ್ತಿದ್ದರು. ಅವರು ಹೆಣ್ಣುಮಕ್ಕಳ ಬದುಕಿನಲ್ಲಾಗುವ ಅನ್ಯಾಯಗಳ ಬಗ್ಗೆ ಮಾತಾಡಲು ಕಾರಣವಿತ್ತು. ಅವರ ಪತಿ ಇಂಗ್ಲೆಂಡಿಗೆ ಹೋಗಿದ್ದರು. ಅವರು ಅಲ್ಲೇ ಒಬ್ಬಳನ್ನು ಮದುವೆಯಾಗಿದ್ದು ತಿರುಗಿ ಬರಲೇ ಇಲ್ಲ. ಈ ಹೆಣ್ಣುಮಗಳು ಅವನನ್ನು ಕಾದುಕಾದು ಕೊರಗಿದರು. ಕೊನೆಗೂ ಆತ ಅಲ್ಲೇ ಸತ್ತನಂತೆ. ನಂತರ ಅವರ ಇಂಗ್ಲೆಂಡ್‌ನ ಪತ್ನಿಯೇ ಭಾರತಕ್ಕೆ ಬಂದು ಇವರನ್ನು ಭೇಟಿಯಾಗಿ ಕ್ಷಮೆ ಯಾಚಿಸಿದರಂತೆ! ಇವರು ಕ್ಷಮಿಸಿದರು. ನಂತರ ಸ್ತ್ರೀಮುಕ್ತಿಯ ಕುರಿತು ತಮ್ಮ ಅನುಭವಗಳ

